**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**ಎಸ್.ಸಿ. :116/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶಶಿಕುಮಾರ್ | ಪ್ರಮಾಣ ಮಾಡಿದ ದಿನಾಂಕ |
| ತಂದೆ ಹೆಸರು | : | ತಿಮ್ಮಯ್ಯ | **27.03.2023** |
| ವಯಸ್ಸು | : | 39 ವರ್ಷ | |
| ವೃತ್ತಿ | : | ಆಟೋ ಚಾಲಕ | ಪಿ.ಡಬ್ಲೂ: 14 |
| ವಾಸಸ್ಥಳ | : | ನಜರ್ ಬಾದ್, ಮೈಸೂರು | ಸಿ.ಡಬ್ಲೂ: 10 |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನಾನು ಈಗ ನ್ಯಾಯಾಲಯದ ಮುಂದೆ ವಿ.ಸಿ. ಮೂಲಕ ಹಾಜರು ಪಡಿಸಿದ 1 ನೇ ಆರೋಪಿಯನ್ನು ನೋಡಿರುವುದಿಲ್ಲ. ಪ್ರಾಸಾ. 7 ಶಿವದತ್ತ ನನಗೆ ಪರಿಚಯ ಇಲ್ಲ. 1 ನೇ ಆರೋಪಿಯ ಕಡೆಯಿಂದ ಪ್ಲಾಸ್ಟಿಕ್ ಪೈಪ್ ನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನಿಪಿ.7 ಮತ್ತು 8 ರಲ್ಲಿ ಇರುವ ಸಹಿಗಳು ನನ್ನವು ಇರುತ್ತವೆ. ಸಾಕ್ಷಿಯ ಸಹಿಗಳನ್ನು ನಿಪಿ.7(ಬಿ) ಮತ್ತು 8(ಬಿ) ಎಂದು ಗುರುತಿಸಲಾಯಿತು. 4 ವರ್ಷಗಳ ಹಿಂದೆ ನಜರ್ ಬಾದ್ ಪೊಲೀಸ್ ಠಾಣೆಯ ಹತ್ತಿರ ನನ್ನ ಆಟೋವನ್ನು ನಿಲ್ಲಿಸಿಕೊಂಡು ನಿಂತಾಗ ಪೊಲೀಸರು ನನ್ನ ಸಹಿ ಪಡೆದಿದ್ದಾರೆ ಆದರೆ ಯಾಕೆ ನನ್ನ ಸಹಿಗಳನ್ನು ಪಡೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೇಳುತ್ತಾರೆ. ಸಾಕ್ಷಿಯು ಪೊಲೀಸರ ಎದುರಿನ ಹೇಳಿಕೆಯ ಪ್ರತಿಕೂಲವಾಗಿ ನುಡಿಯುತ್ತಿರುವುದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ದಿನಾಂಕ: 13.02.2019 ರಂದು ಪೊಲೀಸರು ನನಗೆ ಮತ್ತು ಚಾಸಾ.9 ರವರಿಗೆ ನಿಪಿ.8 ರಂತೆ ನೋಟೀಸ್ ನೀಡಿ ಠಾಣೆಗೆ ಕರೆಯಿಸಿ ಠಾಣೆಯಲ್ಲಿದಂತಹ 1 ನೇ ಆರೋಪಿಯನ್ನು ತೋರಿಸಿ ಆತನಿಂದ ಕೆಲವು ವಸ್ತುಗಳನ್ನು ಅಮಾನತ್ತು ಪಡಿಸಿಕೊಳ್ಳುವ ಕುರಿತು ಪಂಚರಾಗಬೇಕೆಂದು ಕೇಳಿದರು ಎಂದರೆ ಸರಿಯಲ್ಲ. ಠಾಣೆಯಲ್ಲಿದಂತಹ 1 ನೇ

ಆರೋಪಿಯು ನಮ್ಮನ್ನು ಮತ್ತು ಪೋಲೀಸರನ್ನು ಗಿರಿಯ ಭೋವಿ ಪಾಳ್ಯದ ಸ್ಮಶಾನದ ಒಳಗೆ ಇದ್ದ ಪೊದೆಯಿಂದ ಒಂದು ಪ್ಲಾಸ್ಟಿಕ್ ಪೈಪ್ ನ್ನು ತಂದು ಹಾಜರು ಪಡಿಸಿ ಚಿನ್ನಸ್ವಾಮಿಯನ್ನು ಕೊಲೆ ಮಾಡಲು ಬಳಸಿದ್ದೇನೆ ಎಂದು ಹೇಳಿದರು ಅಂದರೆ ಸರಿಯಲ್ಲ. ಸದರಿ ಪೈಪ್ ನ್ನು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂದು ನಿಪಿ.7 ರಂತೆ ಅಮಾನತ್ತು ಪಡಿಸಿಕೊಂಡು ಓದಿ ಹೇಳಿ ನಮ್ಮ ಸಹಿ ಪಡೆದರು ಎಂದರೆ ಸರಿಯಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ 1 ನೇ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದ ಃ</u>**

ಇರುವುದಿಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ</u>

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

27.03.2023
(ಜಿ.ಎಸ್. ಸಂಗ್ರೇಶಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.